# ಶ್ರೀವಿವೇಕಾನಂದ ಸುಪ್ರಭಾತಮ್ - ೨

**ಮಾಯಾವಿಹೀನ ಭುವಿ ನೋ ನಯ ಮೋಹಪಾರೇ**
**ತ್ವಂ ಜಾಗ್ರತೋ ಹಿ ಸತತಂ ಜನಮುಕ್ತಿಧಾರಿನ್ ।**
**ಜಾಗರ್ತಿ ಮಾನವಗಣಸ್ತವ ಸುಪ್ರಭಾವೈ-**
**ರ್ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್ ॥ ೫ ॥**

ನೀನು ಮಾಯೆಯ ಪ್ರಭಾವಕ್ಕೆ ಒಳಗಾಗಿಲ್ಲ, ನಮ್ಮನ್ನೂ ಈ ಮಾಯೆಯ ಪ್ರಭಾವದಿಂದ ಹೊರಬರುವಂತೆ ಮಾಡು. ಸಕಲರ ಮುಕ್ತಿ ನಿನ್ನ ಗುರಿ. ಸದಾ ಜಾಗ್ರತನಾದ ನೀನು, ನಿನ್ನ ಉತ್ತಮ ಪ್ರಭಾವಗಳಿಂದ ಮಾನವ ಸಮೂಹವನ್ನೂ ಜಾಗೃತಗೊಳಿಸುತ್ತಿರುವೆ. ವಿಶ್ವವೀರನೆ, ಶ್ರೇಷ್ಠ ಯತಿಯೆ, ನಿನಗೆ ಸುಪ್ರಭಾತ.

**ಸಂಸಾರಪಾರ ಕಮಲಾಕ್ಷ ಸುಕರ್ಮಕಾರಿನ್**
**ನಿತ್ಯಂ ವಿವೇಕಮತಿಶಕ್ತಿವಿಧಾನದಕ್ಷ ।**
**ಹೇ ಬುದ್ಧ ಜಾಗರಯ ನಃ ಸುಮತಿಂ ವಿವೇಕಂ**
**ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್ ॥ ೬ ॥**

ಶ್ರೇಷ್ಠವಾದ ಕೆಲಸಗಳನ್ನು ಮಾಡುತ್ತಿರುವ, ಕಮಲದಂತಹ ಕಣ್ಣುಳ್ಳ ನೀನು ಸಂಸಾರವನ್ನು ದಾಟಿಬಿಟ್ಟಿರುವೆ. ಪ್ರತಿದಿನವೂ ವಿವೇಕ, ಬುದ್ಧಿ, ಶಕ್ತಿಗಳನ್ನು ಉಂಟುಮಾಡುವುದರಲ್ಲಿ ಸಮರ್ಥನಾದ ಸರ್ವಜ್ಞನೆ, ನಮ್ಮೊಳಗೂ ಸುಮತಿಯನ್ನೂ ವಿವೇಕವನ್ನೂ ಬೆಳಗಿಸು. ವಿಶ್ವವೀರನೆ, ಶ್ರೇಷ್ಠಯತಿಯೆ, ನಿನಗೆ ಸುಪ್ರಭಾತ.

**ಸಂತಪ್ತಮಾನವಗಣೇಷು ಮಹಾಕೃಪಾ ತೇ**
**ಪ್ರಜ್ಞಾವತಾಮಪಿ ಹಿ ತೇ ಮಹನೀಯಪ್ರಜ್ಞಾ ।**
**ಸೂರ್ಯಪ್ರಭಸ್ಯಮಪಿ ತೇ ಕಮನೀಯಕಾಂತಿ-**
**ರ್ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್ ॥ ೭ ॥**



ನೊಂದ ಮಾನವರ ಸಮೂಹದಲ್ಲಿ ನಿನಗೆ ಅಪರಿಮಿತ ಕರುಣೆ. ಘನವಿದ್ವಾಂಸರಿಂದಲೂ ಆದರಿಸಲ್ಪಡುವ ಶ್ರೇಷ್ಠ ಪ್ರಜ್ಞೆ ನಿನ್ನದು. ಸೂರ್ಯನ ಪ್ರಭೆಗಿಂತ ಪ್ರಕರ್ಷವಾದುದು ನಿನ್ನ ಕಾಂತಿ. ವಿಶ್ವವೀರನೆ, ಶ್ರೇಷ್ಠ ಯತಿಯೆ, ನಿನಗೆ ಸುಪ್ರಭಾತ.

**ಆನಂದಸುಂದರ ಹಿ ಶಾಂತ ವಿವೇಕಮೂರ್ತೇ**
**ಧೀರಾಪ್ಯನುಕ್ತಮಗತಿಸ್ತವ ಕರ್ಮಶಕ್ತಿಃ ।**
**ವೀರೇಶ್ವರೋಽಸಿ ಶಿವ ಹೇ ಚ ಶಿವತ್ವದಾಯಿನ್**
**ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್ ॥ ೮ ॥**

ಆನಂದ, ಸುಂದರ, ಶಾಂತ, ವಿವೇಕ ಮೂರ್ತಿಯೆ, ನಿನ್ನ ಕ್ರಿಯಾಶಕ್ತಿ ಮಾತಿಗೆ ನಿಲುಕದುದು, ಸುಲಭವಾಗಿ ಅನುಕರಿಸಲಾಗದುದು. ಸಕಲರಿಗೆ ಮಂಗಳವನ್ನೂ ಶುಭವನ್ನೂ ಶಾಂತಿ ಸುಖವನ್ನೂ ಕರುಣಿಸುವ ವೀರೇಶ್ವರ ಶಿವನೇ ನೀನು. ವಿಶ್ವವೀರನೆ, ಶ್ರೇಷ್ಠಯತಿಯೆ, ನಿನಗೆ ಸುಪ್ರಭಾತ.

— ಸ್ವಾಮಿ ಜೀವಾನಂದ



## ಜಪಾನೀ ಸೂಕ್ತಿಗಳು

ಒಬ್ಬ ಮನುಷ್ಯನನ್ನು ಇನ್ನೊಬ್ಬನಿಗಿಂತ ಮೇಲಾಗಲಿ, ಕೆಳಗಾಗಲಿ ದೇವರು ಸೃಷ್ಟಿ ಮಾಡಿಲ್ಲ ಎಂಬ ಮಾತಿದೆ. ಬುದ್ಧಿವಂತ ಹಾಗೂ ಹೆಡ್ಡನ ನಡುವೆ, ಶ್ರೀಮಂತ ಮತ್ತು ಬಡವನ ನಡುವೆ ಇರುವ ವ್ಯತ್ಯಾಸವೆಲ್ಲ ಶಿಕ್ಷಣದಿಂದ ಉಂಟಾದುದು.

— ಯುಕಿಚಿ ಫುಕುಝಾವಾ

ಜೀವನವೆಂಬುದು ದುಃಖದಿಂದ ಕೂಡಿದೆ. ಅದರಲ್ಲಿ ಗುಲಾಬಿ ಗಿಡದಲ್ಲಿರುವಂತೆ ಮುಳ್ಳುಗಳಿವೆ. ಸಂಸ್ಕೃತಿ ಮತ್ತು ಕಲೆ ಅದರಲ್ಲಿ ಅರಳುವ ಗುಲಾಬಿ ಹೂವುಗಳು. ನೀವೇ ಹೂವು, ನೀವೇ ಮಾನವೀಯತೆ. ನಿಮ್ಮೊಳಗಿರುವ ಮಾನವೀಯತೆಯನ್ನು ಮುಕ್ತಗೊಳಿಸುವುದೇ ಕಲೆ.

— ದೈಸಾಕು ಇಕೆಡಾ

ಸುಖ ಮತ್ತು ಆನಂದವನ್ನು ಪಡೆಯಲು ಪ್ರಯತ್ನಪಡುವುದರಿಂದಲೇ ನಾವು ಅವನ್ನು ಕಳೆದುಕೊಳ್ಳುತ್ತೇವೆ ; ಇದನ್ನು ಅರಿತಾಗಲೇ ನೈಸರ್ಗಿಕ ಕೃಷಿಯ ಮಹತ್ವ ತಿಳಿಯುವುದು. ಕೃಷಿಯ ಅಂತಿಮ ಗುರಿ ಬೆಳೆ ತೆಗೆಯುವುದಲ್ಲ; ಅದು ಮಾನವನ ಜೀವನವನ್ನು ಬೆಳೆಸುವುದು ಹಾಗೂ ಪರಿಪೂರ್ಣತೆಯನ್ನು ಹೊಂದುವುದು.

— ಮಸನೋಬು ಫುಕೋಕಾ

ನನ್ನ ಹೃದಯವು ಮಗುವಿನಂತೆ ಪರಿಶುದ್ಧವೂ ಸರಳವೂ ಆದರೆ, ಅದಕ್ಕಿಂತ ಹೆಚ್ಚಿನ ಆನಂದ ಬೇರೆ ಯಾವುದೂ ಇಲ್ಲವೆಂದು ನನ್ನ ಭಾವನೆ.

——— ಕಿಟಾರೋ ನಿಶಿದಾ